## ಅಕ್ರಮ ಸಕ್ರಮ ಯೋಜನೆಯಲ್ಲಿ ಸ್ಥಳ ಮೌಲ್ಯವನ್ನು ನಿರ್ಧರಿಸಲು ಅನುಸರಿಸುವ ಮಾನದಂಡಗಳು

875 (1068) - ಶ್ರೀ ಜಯಪ್ರಕಾಶ್ ಹೆಗ್ಡೆ .ಕೆ. (ಬ್ರಹ್ಮಾವರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಅಕ್ರಮ-ಸಕ್ರಮ ಯೋಜನೆಯಲ್ಲಿ ಸ್ಥಳ ಮೌಲ್ಯವನ್ನು ನಿರ್ಧರಿಸಲು ಅನುಸರಿಸುವ ಮಾನದಂಡಗಳು ಯಾವುವು? ಮಾನದಂಡಗಳ ಅನುಸರಣೆಯು ಸೂಕ್ತ ರೀತಿಯಲ್ಲಿ ಅನುಸರಿಸಲ್ಪಡುತ್ತಿದೆಯೇ;

ಆ. ನಿಯಮ 94ಬಿ ಅಡಿಯಲ್ಲಿ (50 ಮತ್ತು 53) ಹಾಗೂ ನಿಯಮ 94ಸಿ (ಆರ್ಜಿ-1) ವ್ಯಾಪ್ತಿಯಲ್ಲಿ ಸ್ಥಳ ಮೌಲ್ಯ ದರಗಳ ವ್ಯತ್ಯಾಸವು ಅತೀ ಹೆಚ್ಚಾಗಿ ಕಂಡು ಬರುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ದರಗಳ ವ್ಯತ್ಯಾಸವನ್ನು ಸರಿಪಡಿಸಲು ಸರಕಾರದವರು ಕೈಗೊಂಡ ಕ್ರಮಗಳ ವಿವರಗಳೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ. ಅಕ್ರಮ-ಸಕ್ರಮ ಯೋಜನೆಯಡಿಯಲ್ಲಿ ಸಕ್ರಮಗೊಳಿಸಲಾಗುವ ಜಮೀನುಗಳಿಗೆ, ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ನಿಯಮ 108(ಜಿ)ರನ್ವಯ ಜಮೀನಿನ ಮೌಲ್ಯವನ್ನು ಪಾವತಿ ಮಾಡಬೇಕಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕಿಮ್ಮತ್ತು ಪಾವತಿಯಿಂದ ವಿನಾಯ್ತಿ ನೀಡಲಾಗಿದೆ. ಇತರರು ಭೂ ಕಂದಾಯದ 50 ಪಟ್ಟು ಮೊತ್ತವನ್ನು ಕಿಮ್ಮತ್ತಾಗಿ ಪಾವತಿಸಬೇಕಾಗುತ್ತದೆ. 1964ರ ಕರ್ನಾಟಕ ಭೂ ಕಂದಾಯ ಅಧಿನಿಯಮಗಳ ಕಲಂ 94ಸಿ ರಡಿಯಲ್ಲಿ ರಚಿಸಲಾಗಿರುವ, ಕರ್ನಾಟಕ ಸ್ವಾಧೀನತೆಯಲ್ಲಿರುವ ಭೂಮಿಯಲ್ಲಿ ವಾಸದ ಮನೆಗಳ ನಿರ್ಮಾಣಕ್ಕೆ ಸಂಬಂಧಿಸಿದ ಭೂ ಮಂಜೂರಾತಿ ನಿಯಮಗಳು 1999ರ ನಿಯಮ 6ರಡಿಯಲ್ಲಿ ನಿಗಧಿಪಡಿಸಿರುವ ದರಗಳ ಅನುಸಾರ ಸಕ್ರಮೀಕರಿಸಲಾಗುವ ಸ್ಥಳಕ್ಕೆ ಮೌಲ್ಯವನ್ನು ಪಾವತಿಸಬೇಕಾಗುತ್ತದೆ. ನಿಯಮಾನುಸಾರ ಮಾನದಂಡಗಳನ್ನು ಸೂಕ್ತ ರೀತಿಯಲ್ಲಿ ಅನುಸರಿಸಲಾಗುತ್ತಿದೆ.

ಆ. ಇಲ್ಲ

ಉದ್ಭವಿಸುವುದಿಲ್ಲ.

## ಬಗರ್‌ಹುಕುಂ ಸಾಗುವಳಿ ಭೂಮಿಯ ಸಕ್ರಮೀಕರಣದ ವಿಚಾರ

877 (1128) - ಶ್ರೀ ಜಯಪ್ರಕಾಶ್ ಹೆಡ್ಗೆ.ಕೆ. (ಬ್ರಹ್ಮಾವರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬಗರ್ ಹುಕುಂ ಭೂಮಿಯ ನಿಗಧಿತ ಪ್ರಮಾಣವನ್ನು ನಿಗದಿಪಡಿಸುವಾಗ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ನಂಜಭೂಮಿ ಮತ್ತು ಪುಂಜಭೂಮಿ ಎಂದು ನಿರ್ದಿಷ್ಟವಾಗಿ ವಿಂಗಡಿಸಿ ನಂಜಭೂಮಿಯ ವಾಸ್ತವ ಪ್ರಮಾಣವನ್ನು ದ್ವಿಗುಣಗೊಳಿಸಿ ಲೆಕ್ಕಹಾಕುತ್ತಿರುವುದು ನಿಜವೆ; ಹೌದಾದರಲ್ಲಿ ಯಾವ ಆಧಾರದ ಮೇಲೆ ನಂಜಭೂಮಿಯನ್ನು ದ್ವಿಗುಣಗೊಳಿಸಿ ಲೆಕ್ಕಲಾಗುತ್ತಿದ್ದಾರೆ;

ಆ. ವಾಸ್ತವವಾಗಿ ಪುಂಜಭೂಮಿಗೆ ಜಾಸ್ತಿ ಬೆಲೆ ಇದ್ದು ನಂಜಭೂಮಿಗೆ ಕಡಿಮೆ ಬೆಲೆ ಇರುವುದರಿಂದ ನಂಜಭೂಮಿಯನ್ನು ಲೆಕ್ಕಾಚಾರದಲ್ಲಿ ದ್ವಿಗುಣಗೊಳಿಸುತ್ತಿರುವ ಕ್ರಮವನ್ನು ಸರಕಾರದವರು ಕೈಬಿಡಲು ಮುಂದಾಗುವರೇ?

ಇ. ಅಕ್ರಮ:ಸಕ್ರಮದಲ್ಲಿ ಫಲಾನುಭವಿಗಳಿಗೆ ಸಕ್ರಮಗೊಳಿಸಲಾಗುವ ಗರಿಷ್ಟ ಭೂಮಿಯ ವಿಸ್ತೀರ್ಣ ಎಷ್ಟು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ. ಹೌದು; ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94(ಎ) (4)ರ ಮೊದಲನೆಯ ಪರಂತುಕ ಹಾಗೂ ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961ರ ಮೊದಲನೆ ಪರಿಚ್ಛೇದದಲ್ಲಿನ ವಿವರಣೆಯಂತೆ ಲೆಕ್ಕಾಚಾರ ಹಾಕಲಾಗುತ್ತಿದೆ.

ಆ. ಪರಿಶೀಲಿಸಲಾಗುವುದು.

ಇ. ಅಕ್ರಮ ಸಾಗುವಳಿದಾರರು ಹೊಂದಿರುವ ಸಾಗುವಳಿ ಜಮೀನು ಸೇರಿ 2 ಹೆಕ್ಟೇರ್ ಮಿತಿ ಇರತ್ತದೆ.

**ಉಡುಪಿ ಜಿಲ್ಲೆಯ ಅನಂತಪದ್ಮನಾಭ ದೇವಸ್ಥಾನದ ಜಮೀನುಗಳ ವಿವರ**

878 (1338) - ಶ್ರೀ ಜಯಪ್ರಕಾಶ್ ಹೆಗ್ಡೆ.ಕೆ. (ಬ್ರಹ್ಮಾವರ): ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಉಡುಪಿ ಜಿಲ್ಲೆಯ ಪೆರ್ಡೂರು ಶ್ರೀ ಅನಂತ ಪದ್ಮನಾಭ ದೇವಸ್ಥಾನದ ಜಮೀನುಗಳ ವಿವರಗಳೇನು? ದೇವಸ್ಥಾನದ ಜಮೀನಿಗೆ ಸಂಬಂಧಪಟ್ಟ ಸ್ಥಳದ ಅಕ್ರಮವಾಗಿ ಕಟ್ಟಡ ಇತ್ಯಾದಿಗಳನ್ನು ಕಟ್ಟಿಕೊಂಡಿದವರ ಮೇಲೆ ಸರ್ಕಾರದವರು ಜರುಗಿಸಿದ ಕ್ರಮಗಳೇನು? ಅಕ್ರಮ ಜಮೀನಿನ ವಿವರಗಳೇನು?

2. ಈಗಲಾದರೂ ಅಕ್ರಮ ಕಟ್ಟಡಗಳನ್ನು ತೆರವುಗೊಳಿಸಿ ಜಮೀನನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲು ಕೂಡಲೆ ಕ್ರಮಕೈಗೊಳ್ಳದೆ?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು) :

1. ದೇವಸ್ಥಾನದಲ್ಲಿ ಲಭ್ಯವಿರುವ ದಾಖಲೆಗಳ ಪ್ರಕಾರ ಕರ್ನಾಟಕದ ಭೂ ಸುಧಾರಣೆ ಕಾಯಿದೆ ಜಾರಿಗೆ ಬರುವ ಪೂರ್ವದಲ್ಲಿ ಅಂದಾಜು 1153.99 ಎಕರೆ ಜಮೀನು ಇದ್ದು, ಈ ಜಮೀನಿನ ಪೈಕಿ ಅಂದಾಜು 1107.81 ಎಕರೆ ಜಮೀನು ಭೂ ಸುಧಾರಣಾ ಕಾಯಿದೆ ಪ್ರಕಾರ ಬಿಟ್ಟು ಹೋಗಿದ್ದು, ಪ್ರಸ್ತುತ ದೇವಳದ ವಶದಲ್ಲಿರುವ ಜಮೀನು 46.18 ಎಕರೆ ಎಂದು ಅಂದಾಜಿಸಲಾಗಿದೆ. ಪ್ರಸ್ತುತ ದೇವಸ್ಥಾನದ ಜಮೀನಿನಲ್ಲಿ ಅಕ್ರಮ ಕ್ಟಟಡ ಕಟ್ಟಿದ ಪ್ರಕರಣ ಇರುವುದಿಲ್ಲ.

ಅನಧಿಕೃತವಾಗಿ ಕಟ್ಟಲಾಗುತ್ತಿದೆ ಎನ್ನುವ ಕಟ್ಟಡವು ಪೆರ್ಡೂರು ಗ್ರಾಮದ ಸ.ನಂ. 127 ರಲ್ಲಿನ 0.03 ಸೆಂಟ್ಸ್ ಹಾಗೂ 0.12 ಸೆಂಟ್ಸ್ ಸ್ಥಳದಲ್ಲಿ ಇದ್ದು, ಶ್ರೀ ಕೊಕ್ರ ಪೂಜಾರಿಯವರು ಈ ಸ್ಥಳದ ಜಾಲ ಗೇಣಿದಾರರಾಗಿದ್ದು, ಉಡುಪಿ ಸಿವಿಲ್ ಜಡ್ಜ್ ನ್ಯಾಯಾಲಯದ ಓ.ಎಸ್. ನಂ. 707/90 ಹಾಗೂ ಎಕ್ಸಿಕ್ಯೂಷನ್ ದಾವೆ ನಂ. 521/97 ದಿನಾಂಕ:18-7-1998 ರಂತೆ ರಾಜೀ ಡಿಕ್ರೀ ಮೂಲಕ ಖಾಯಂ ಗೇಣಿ ಹಕ್ಕುವಾರಿಸು ಹಕ್ಕಿನಂತೆ ಶಾಂತರಾಮಸೂಡರ ಹೆಸರಿಗೆ ದಾಖಲಾಗಿದ್ದು, ಸದರಿ ಸ್ಥಳವು ಬ್ರಹ್ಮಾವರ ಉಪ ನೋಂದಣಾಧಿಕಾರಿಯವರ ದಾಸ್ತಾವೇಜು ನಂ. 1232/98-99, ದಿನಾಂಕ 20-10-1998 ರಂತೆ ನೋಂದಣಿಯಾಗಿ ಆರ್.ಟಿ.ಸಿ. ಕಾಲಂ 9ರಲ್ಲಿ ಶಾಂತರಾಮ ಸೂಡರ ಇವರ ಖಾಯಂ ಗೇಣಿದಾರರೆಂದು ದಾಖಲಾಗಿರುತ್ತದೆ.